## ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ

## ಸಿ.ಸಿ. ನಂ. 622/2019

### ಮುಂದುವರೆದ ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ ಎಂ ಡಿ ಜೆ ವಕೀಲರಿಂದ

13. ಯಾವುದೇ ಪಾಲುದಾರಿಕೆ ಸಂಸ್ಥೆ ದಾಖಲೆಯ ಮೂಲಕ ನೋಂದಾವಣಿ ಆಗಬೇಕು ಎಂದರೆ ಸರಿ. ಸದರಿ ದಾಖಲೆಗೆ ಸಾಕ್ಷಿದಾರರು ಮತ್ತು ಬಿಕ್ಲಂದಾರರು ಇರುತ್ತಾರೆ ಎಂದರೆ ಸರಿ. ಪಾಲುದಾರಿಕೆ ಕಡಿತಗೊಂಡಿದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಢಿಸಿದ್ದೆನೆ. ಆ ಬಗ್ಗೆ ಒಂದು ಅಗ್ರಿಮೆಂಟ್ ಆಗಿರುತ್ತದೆ. ಸದರಿ ದಾಖಲೆಗೆ ಸಾಕ್ಷಿದಾರರು ಬಿ ಚಂದ್ರಮೌಳಿ ಮತ್ತು ಆರ್ ಶಿವಶಂಕರ ಎನ್ನುವವರು ಸಾಕ್ಷಿದಾರರು ಇರುತ್ತಾರೆ. ಬಿಕ್ಲಂದಾರರು ಯಾರು ಇರುವುದಿಲ್ಲ. ಅಗ್ರಿಮೆಂಟ್ ಬೇರೆ ಮತ್ತು ಪಾರ್ಟನರ್ ಶಿಪ್ ಡಿಸಾಲ್ವ್ ಡೀಡ್ ಬೇರೆ ಎಂದರೆ ಸರಿ.

14. ನಿಪಿಃ 18 ಸೆಲ್ಪ ಚೆಕ್ ಎಂದರೆ ಸರಿ. ನಾನು ದೂರಿನಲ್ಲಿ ಸದರಿ ಚೆಕ್ಕನ್ನು ದೇವರಾಜ ಗೌಡರವರಿಗೆ ನೀಡಿದ್ದೆನೆ ಎಂದು ಬರೆಯಿಸಿದ್ದೆನೆ ಎಂದರೆ ಸರಿ. ಸದರಿ ಚೆಕ್ಕುಗಳನ್ನು ನೀಡಿದ ದಿನಾಂಕ ಹಾಗೂ ನಾನು ಈ ಖಾಸಗಿ ದೂರು ಸಲ್ಲಿಸಿದ ದಿನಾಂಕ ನಡುವೆ ಒಂದುವರೆಯಿಂದ ಎರಡು ವರ್ಷ ವ್ಯತ್ಯಾಸ ಇದೆ ಎಂದರೆ ಸರಿ. ಯಾವ ಕಾರಣಕ್ಕೆ ವಿಳಂಬ ಆಯಿತು ಎಂಬ ಬಗ್ಗೆ ನಾನು ದೂರಿನಲ್ಲಿ ಬರೆಯಿಸಿಲ್ಲ ಎಂದರೆ ಸರಿ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಸ್ವಇಚ್ಛೆಯಿಂದ "ಅ ಅವಧಿಯಲ್ಲಿ ಚೆಕ್ಕುಗಳ ಬಗ್ಗೆ ಬ್ಯಾಂಕ್ ಹಾಗೂ ನನ್ನ ನಡುವೆ ಪತ್ರ ವ್ಯವಹಾರಗಳು ಆಗುತ್ತಿತ್ತು ಮತ್ತು ರಾಜೀ ಮಾತುಕತೆ ಆಗುತ್ತಿತ್ತು" ಎಂದು ನುಡಿಯುತ್ತಾರೆ. ಆ ರೀತಿ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ರಾಜೀ ಮಾಡಿಸುವ ಬಗ್ಗೆ ಬ್ಯಾಂಕ್‌ನವರು ಯಾವುದೇ ಲಿಖಿತ ಬರವಣಿಗೆ ನೀಡಿರುವುದಿಲ್ಲ.

15. 2015-16 ನೇ ಸಾಲಿನಲ್ಲಿ ನಮ್ಮ ಗ್ಯಾಸ್ ಏಜಿನ್ಸಿ ಕಚೇರಿಯಲ್ಲಿ ಸಿ ಸಿ ಟಿ ವಿ ಕ್ಯಾಮರ ಇರುವುದಿಲ್ಲ. ಈಗ ಇರುತ್ತದೆ. ಪ್ರತಿದಿನ ನಮ್ಮ ಗ್ಯಾಸ್ ಏಜೆನ್ಸಿ ವ್ಯವಹಾರ ಬ್ಯಾಂಕಿನಲ್ಲಿ ಆಗುತ್ತದೆ ಎಂದರೆ ಸರಿ. ನಮ್ಮ ಕಚೇರಿಯ ಚೆಕ್ಕಿನ ವ್ಯವಹಾರ 2-3 ದಿನಗಳಲ್ಲಿ ಗೊತ್ತಾಗುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ ಚೆಕ್ಕು ನೀಡಿದ 2-3 ದಿನಗಳಲ್ಲಿ ಅವ್ಯವಹಾರ ಆದ ಬಗ್ಗೆ ಗೊತ್ತಾಗಿರಲಿಲ್ಲ. ಆದ ಕಾರಣ ತಕ್ಷಣ ದೂರು ಕೊಟ್ಟಿರುವುದಿಲ್ಲ. 2015-16 ನೇ ಸಾಲಿನ ವ್ಯವಹಾರದ ಬಗ್ಗೆ ಸೆಪ್ಟಂಬರ್ 2016 ರಲ್ಲಿ

ಆದ ಲೆಕ್ಕಪರಿಶೋಧನೆಯಲ್ಲಿ ಗೊತ್ತಾಯಿತು. ಸದರಿ ಲೆಕ್ಕಪರಿಶೋಧನೆ ವರದಿಯನ್ನು ಈ ಪ್ರಕರಣದಲ್ಲಿ ಸಲ್ಲಿಸಿಲ್ಲ ಎಂದರೆ ಸರಿ.

16. ನಿಪಿಃ 3 ಸಂಪೂರ್ಣ ದಾಖಲೆ ಇಲ್ಲ ಎಂದರೆ ಸರಿ. ಸದರಿ ದಾಖಲೆ ಜೆರಾಕ್ಸ ಪ್ರತಿ ಎಂದರೆ ಸರಿ. ನಿಪಿಃ 7 ಮತ್ತು 8 ದಾಖಲೆಯಲ್ಲಿ ಮಾಡಿದ ವ್ಯವಹಾರದಲ್ಲಿ ಸಾಮಾನ್ಯವಾಗಿ ಸಾಕ್ಷಿಗಳು ಹಾಗೂ ಬಿಕ್ಲಂದಾರರು ಸಹಿ ಮಾಡುತ್ತಾರೆ ಎಂದರೆ ಸರಿ. ನಿಪಿಃ 7 ಮತ್ತು 8 ರಲ್ಲಿ ಸಾಕ್ಷಿಗಳ ಹಾಗೂ ಬಿಕ್ಲಂದಾರರ ಸಹಿ ಇಲ್ಲ ಎಂದರೆ ಸರಿ. ನಿಪಿಃ 9 ಮತ್ತು 10 ರ ಮೂಲ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿಃ 10 ರಲ್ಲಿ ಚೆಕ್ಕನ್ನು ಯಾರ ಹೆಸರಿಗೆ ನೀಡಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಚೆಕ್ಕ ದುರುಪಯೋಗ ಆಗಿದೆ ಎಂದು ಬ್ಯಾಂಕನವರು ದೂರನ್ನು ಸಲ್ಲಸಿಲ್ಲ ಎಂದರೆ ಸರಿ. ಆ ಬಗ್ಗೆ ನನ್ನ ಹಾಗೂ ಬ್ಯಾಂಕ್ ನ ನಡುವೆ ಪತ್ರ ವ್ಯವಹಾರ ಆಗಿದೆ ಎಂದರೆ ಸರಿ. ನಿಪಿಃ 16 ರ ಪತ್ರ ಬರೆದ ನಂತರ ಬ್ಯಾಂಕ್ ನವರು ಉತ್ತರ ನೀಡಿದ ಬಗ್ಗೆ ನೆನಪಿಲ್ಲ. ಈಗಲೂ ಸಹ 1 ನೇ ಆರೋಪಿ ಕೃಷ್ಣಾ ಏಜೆನ್ಸಿ ಪಾಲುದಾರಿಕೆ ಸಂಸ್ಥೆಯಲ್ಲಿ ದಾಖಲೆಗಳ ಪ್ರಕಾರ ಪಾಲುದಾರರು ಇರುತ್ತಾರೆ ಎಂದರೆ ಸರಿ. ಈ ದೂರಿನಲ್ಲಿ ನಾನು ಹೇಳಿರುವಂತೆ ಆರೋಪಿ ಯಾವುದೇ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಪಾಲುದಾರಿಕೆಯ ಪ್ರಕಾರ ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಅವರ ವಿರುದ್ಧ ಹಲವಾರು ಪ್ರಕರಣ ದಾಖಲು ಮಾಡಿದ್ದೆನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಮೋಸ ಮಾಡಿದ್ದರೆ ಅವರ ವಿರುದ್ಧ ಪ್ರಸಾದ ಯಾದವ್, ಎಸ್ ಬಸವರಾಜ, ದೇವರಾಜ ರವರು ಪ್ರಕರಣ ದಾಖಲು ಮಾಡುತ್ತಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿ ವಿರುದ್ಧ ಸುಳ್ಳು ಅಪಾದನೆ ಮಾಡಿದ್ದೆನೆ ಎಂದರೆ ಸರಿಯಲ್ಲ. ಆರೋಪಿ ವಿರುದ್ದ ಸುಳ್ಳು ದಾಖಲೆ ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**